ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಕುರಿತು

ಶ್ರೀ ಸುನೀಲ್ ವಲ್ಯಾಪುರ್(ವಿಧಾನ ಸಭೆಯಿಂದ ಚುನಾಯಿತರಾದವರು) –

717 (824) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರವು ಸ್ಥಾಪನೆಯಾದದ್ದು ಯಾವಾಗ; ಸದರಿ ಪ್ರಾಧಿಕಾರದಿಂದ ನಿರ್ಮಾಣವಾದ ಲೇಔಟ್‌ಗಳು ಯಾವುವು; ಇವುಗಳ ವೆಚ್ಚ ಎಷ್ಟು;

(ಆ) ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಲಾದ ನಿವೇಶನಗಳೆಷ್ಟು; ಮತ್ತು ಸಿ.ಎ. ನಿವೇಶನಗಳ ಸಂಖ್ಯೆ ಎಷ್ಟು; (ಅಳತೆವಾರು ಮಾಹಿತಿ ನೀಡುವುದು)

(ಇ) ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಆದಾಯವೆಷ್ಟು; (ಪ್ರಾರಂಭದಿಂದ ಮಾಹಿತಿ ನೀಡುವುದು)

(ಈ) ಖಾಸಗಿಯವರಿಂದ ನಿರ್ಮಾಣವಾದ ಲೇಔಟ್‌ಗಳು ಯಾವುವು; ಹಾಗೂ ಅವುಗಳಿಂದ ನಿರ್ಮಾಣವಾದ ನಿವೇಶನಗಳೆಷ್ಟು; (ಅಳತೆವಾರು ಮಾಹಿತಿ ನೀಡುವುದು)

(ಉ) ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಮಂಜೂರಾದ ಸಿಬ್ಬಂದಿ ಎಷ್ಟು; ಕಾರ್ಯನಿರತ ಮತ್ತು ಖಾಲಿಯಿರುವ ಹುದ್ದೆಗಳೆಷ್ಟು; (ವಿವರ ಒದಗಿಸುವುದು)

(ಊ) ಪ್ರಾಧಿಕಾರದಿಂದ ಭೂ ಸ್ವಾಧೀನವಾದ ಜಮೀನೆಷ್ಟು ಮತ್ತು ಭೂಸ್ವಾಧೀನಕ್ಕೆ ಪಾವತಿಯಾದ ಮೊತ್ತ ಎಷ್ಟು? (ಸಂಪೂರ್ಣ ವಿವರ ಒದಗಿಸುವುದು)